**ಸಾಕ್ಷಿಯನ್ನು ದಿಃ *09/01/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಪಿಎಸಯು ವಕೀಲರಿಂದ ಆರೋಪಿ ಪರವಾಗಿ.**

ಸದರಿ ಪ್ರಕರಣ ಹೂಡುವ ಮುನ್ನ ನಮ್ಮ ವಕೀಲರ ಮುಖಾಂತರ ಆರೋಪಿತರಿಗೆ ಕಾನೂನುಬದ್ದ ನೋಟೀಸು ಕಳಿಸಿರುತ್ತೇನೆ. ಸದರಿ ನೋಟೀಸಿಗೆ ಮಾಹಿತಿ ನಾನೇ ನೀಡಿರುತ್ತೇನೆ ಮತ್ತು ಅದರ ಮಾಹಿತಿ ನನಗೆ ಇದೆ. ಸದರಿ ನೋಟೀಸಿನಲ್ಲಿ ನನ್ನ ಮತ್ತು ಆರೋಪಿತರ ನಡುವೆ ಯಾವ ಸಮಯದಲ್ಲಿ ಯಾವ ರೀತಿಯ ಹಣಕಾಸಿನ ವ್ಯವಹಾರವಾಯಿತು ಎಂದು ಬರೆಸಿರುತ್ತೇನೆ. ಅದರಂತೆ ಯಾವ ದಿನಾಂಕಗಳಂದು ಮತ್ತು ಎಷ್ಟು ಮೊತ್ತಕ್ಕೆ ನಮ್ಮ ನಡುವೆ ಹಣಕಾಸಿನ ವ್ಯವಹಾರವಾಗಿದೆ ಎಂದ ಸಹ ಬರೆಸಿರುತ್ತೇನೆ. ಸದರಿ ಹಣಕಾಸಿನ ವ್ಯವಹಾರದ ಕಾರಣ ಮತ್ತು ಉದ್ದೇಶ ಸಹ ನಾನು ಆ ನೋಟೀಸಿನಲ್ಲಿ ಬರೆಸಿರುತ್ತೇನೆ. ಸದರಿ ನೋಟೀಸಿನಲ್ಲಿ ಆರೋಪಿತರ ಉದ್ಯೋಗ ಸಹ ಉಲ್ಲೇಖ ಮಾಡಿರುತ್ತೇನೆ.

ಸಾಕ್ಷಿದಾರರಿಗೆ ತಾವು ಕಳಿಸಿದ ಕಾನೂನುಬದ್ದನೋಟೀಸು ತೋರಿಸಿ, ಹೀಗೆ ಮೇಲೆ ಕೇಳಿದ ಮಾಹಿತಿಯನ್ನು ಬರೆಯಲಾಗಿದೆಯೇ ಇಲ್ಲವೊ ನೋಡಿ ಹೇಳಿ ಎಂದು ಪ್ರಶ್ನಿಸಲಾಗಿ, ಸಾಕ್ಷಿದಾರರನ್ನು ಅದನ್ನು ನೋಡಿ ಸದರಿ ಮಾಹಿತಿಯ ವಿವರಗಳು ಬರೆದಿಲ್ಲ, ನೋಟೀಸಿಗೆ ಎಷ್ಟು ಮಾಹಿತಿ ಬೇಕಾಗುತ್ತದೆ ಅಷ್ಟು ಮಾಹಿತಿ ಬರೆದಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ನೋಟೀಸಿಗೆ ಎಷ್ಟು ಮಾಹಿತಿ ಬೇಕು ಅಷ್ಟು ಮಾತ್ರ ಬರೆದಿದ್ದು, ಹೆಚ್ಚುವರಿ ಮಾಹಿತಿಯನ್ನು ನನ್ನ ಖಾಸಗಿ ಫಿರ್ಯಾದಿಯಲ್ಲಿ ಬರೆದಿರುತ್ತೇನೆ ಎಂದು ಸದರಿ ಫಿರ್ಯಾದಿಯಲ್ಲಿ ಮತ್ತು ಸ್ವಖುಷಿ ಹೇಳಿಕೆಯಲ್ಲಿ ಬರೆದುಕೊಂಡಿಲ್ಲ.

ನಾನು ಕಳುಹಿಸಿದ ಕಾನೂನುಬದ್ದ ನೋಟೀಸಿಗೆ ಆರೋಪಿತರು ಪ್ರತ್ಯೂತ್ತರ ನೀಡಿರುತ್ತಾರೆ ಎಂದರೆ ನಿಜ. ಸದರಿ ಪ್ರತ್ಯೂತ್ತರದಲ್ಲಿ ಆರೋಪಿತರು ಹಣಕಾಸಿನ ವ್ಯವಹಾರದ ಕುರಿತು ಪೂರ್ಣ ಮತ್ತು ಸಮರ್ಪಕ ಮಾಹಿತಿ ನಾನು ಬರೆದಿರುವುದಿಲ್ಲ ಎಂದು ಉಲ್ಲೇಖ ಮಾಡಿರುತ್ತಾರೆ ಎಂದರೆ ನಿಜ. ಈ ರೀತಿ ಕಾನೂನುಬದ್ದ ನೋಟೀಸಿನ ಮಾಹಿತಿ ಮತ್ತು ಸ್ವಖುಷಿ ಹೇಳಿಕೆ ಮತ್ತು ಖಾಸಗಿ ಫಿರ್ಯಾದಿಯಲ್ಲಿ ಮಾಹಿತಿಯಲ್ಲಿ ಬೆಳವಣಿಗೆ ಮಾಡಿರುತ್ತೇನೆ ಎಂದರೆ ನಿಜ. ಈ ರೀತಿ ನಾನು ಆರೋಪಿತರು ನೀಡಿರುವ ಪ್ರತ್ಯೂತ್ತರ ನೋಡಿಕೊಂಡು ಖಾಸಗಿ ಪಿರ್ಯಾದಿಯಲ್ಲಿ ಮತ್ತು ಸ್ವಖುಷಿ ಹೇಳಿಕೆಗಳಲ್ಲಿಬೆಳವಣಿಗೆ ಮಾಹಿತಿಗಳನ್ನು ನೀಡಿ ಸಲ್ಲಿಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕಾನೂನುಬದ್ದ ನೋಟೀಸಿಗೆ ಎಷ್ಟು

ಮಾಹಿತಿ ಬೇಕು ಅಷ್ಟು ಮಾಹಿತಿ ನೀಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ಪ್ರತ್ಯುತ್ತರ ನೋಡಿ ನಾನು ನನ್ನ ಫಿರ್ಯಾದಿ ಮತ್ತು ಸ್ವಖುಷಿ ಹೇಳಿಕೆಗಳಲ್ಲಿ ಹೆಚ್ಚಿನ ಮಾಹಿತಿ ನೀಡಿದರೂ ಸಹ ಹೆಚ್ಚಿನ ಮಾಹಿತಿ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಕಾನೂನುಬದ್ದ ನೋಟೀಸಿನಲ್ಲಿ ಆರೋಪಿತರು ಕೊಟ್ಟಿದ್ದಾರೆ ಎಂದು ಹೇಳಲಾದ ಚೆಕ್ಕಿನ ನಿಖರವಾದ ದಿನಾಂಕ ಬರೆಸಿಲ್ಲ, ಆದರೆ ಮಾಹೆ ಮತ್ತು ಇಸ್ವಿ ಬರೆಸಿರುತ್ತೇನೆ. ಈ ರೀತಿ ಕೊಟ್ಟಿದ್ದಾರೆ ಎಂದು ಹೇಳಲಾದ ಚೆಕ್ಕನ್ನು ಯಾರ ಸಮಕ್ಷಮ ಯಾವ ಸ್ಥಳದಲ್ಲಿ ಕೊಟ್ಟಿದ್ದಾರೆ ಎಂದು ಸಹ ನೋಟೀಸಿನಲ್ಲಿ ಬರೆಸಿಲ್ಲ. ಈ ರೀತಿ ಚೆಕ್ಕನ್ನು ಸೆಪ್ಟೆಂಬರ 2024 ರಲ್ಲಿ ಕೊಟ್ಟಿದ್ದಾರೆ ಎಂದು ಬರೆಸಿರುತ್ತೇನೆ. ಸಾಕ್ಷಿದಾರರಿಗೆ ತಾವು ಕಳಿಸಿರುವ ಕಾನೂನುಬದ್ದ ನೋಟೀಸನ್ನು ತೋರಿಲಾಗಿ ನೀವು ಈ ರೀತಿ ಹೇಳಿರುವ ಹೇಳಿಕೆ ಮಾಹಿತಿಗಳನ್ನು ಬರೆದಿದ್ದು ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನೋಡಿ ಚೆಕ್ಕಿನ ವಿವರಗಳನ್ನು ಬರೆದಿದ್ದು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ಬ್ಯಾಂಕಿನ ವ್ಯವಹಾರದ ದಾಖಲೆಗಳನ್ನು ಹೊರತಪಡಿಸಿ ನನ್ನ ಮತ್ತು ಆರೋಪಿತರ ನಡುವೆ ಯಾವ ಕಾರಣಕ್ಕಾಗಿ ಹಣದ ವಿನಿಯೋಗವಾಗಿರುತ್ತದೆ ಎಂದು ತೋರಿಸಲು ಯಾವುದೇ ಲಿಖಿತ ದಾಖಲೆ ಇರುವುದಿಲ್ಲ, ಆರೋಪಿತರು ನನ್ನ ಸ್ನೇಹಿತ ಇರುವ ಕಾರಣ ವಾಟ್ಸಪ್ಪ ಸಂದೇಶಗಳನ್ನು ರವಾನಿಸಿದ್ದು ಇರುತ್ತದೆ. ಈ ರೀತಿ ಇರುವ ಮಾಹಿತಿ ಅಂದರೆ ವಾಟ್ಸಪ್ಪ ಸಂದೇಶಗಳ ಕುರಿತು ನೋಟೀಸಿನಲ್ಲಿ, ಫಿರ್ಯಾದಿಯಲ್ಲಿ ಅಥವಾ ಸ್ವಖುಷಿ ಹೇಳಿಕೆಗಳಲ್ಲಿ ಬರೆಸಿಲ್ಲ. ಸದರಿ ಪ್ರಕರಣದಲ್ಲಿ ನಾನು ಹೇಳುತ್ತಿರುವ ವಾಟ್ಸಪ್ಪ ಸಂದೇಶಗಳನ್ನು ಹಾಜರುಪಡಿಸಿಲ್ಲ. ಪ್ರಸ್ತುತ ನನ್ನ ಹತ್ತಿರ ವಾಟ್ಸಪ್ಪ ಸಂದೇಶಗಳು ಇರುತ್ತವೆ. ಅವುಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಮಾಡಬಹುದು. ನಾನು ಹೇಳುತ್ತಿರುವ ವಾಟ್ಸಪ್ಪ ಸಂದೇಶಗಳು ನಮ್ಮ ನಡುವೆ ಯಾವತ್ತು ವಿನಿಮಯವಾಗಿಲ್ಲ, ಆದ್ದರಿಂದ ಸದರಿ ಸಂದೇಶಗಳ ಕುರಿತು ನಾನು ಇಲ್ಲಿಯವರೆಗೂ ನನ್ನ ದಾಖಲೆಗಳಲ್ಲಿ ಬರೆಸಿಲ್ಲ ಮತ್ತು ಸದರಿ ಸಂದೇಶಗಳನ್ನು ನ್ಯಾಯಾಲಯಕ್ಕೆ ಸಹ ಹಾಜರುಪಡಿಸಿರುವುದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಆದ್ದರಿಂದ ಸದರಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸೆಪ್ಟೆಂಬರ 2024 ನೇ ಇಸ್ವಿಯಲ್ಲಿ ಚೆಕ್ಕ ಕೊಟ್ಟಿದ್ದಾನೆ ಎಂದು ಹೇಳಲಾದ ಸಮಯದ ಪೂರ್ವದಲ್ಲಿ ಈ ರೀತಿ ನನಗೆ ಇಂತಿಷ್ಟು ಮೊತ್ತ ಆರೋಪಿತರು ಬಾಕಿ ಇರುವ ಕುರಿತು ಮತ್ತು ನಾನು ಮರುಪಾವತಿ ಬೇಡಿಕೆ ಇಟ್ಟಿರುವ ಕುರಿತು ಲಿಖಿತವಾದ ದಾಖಲೆ ಇರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ ಲಿಖಿತ ಬೇಡಿಕೆ ಇಟ್ಟಿರುವ ದಾಖಲಾತಿಯ ವಿವರಗಳನ್ನು ನನ್ನ ನೋಟೀಸಿನಲ್ಲಿ, ಫಿರ್ಯಾದಿಯಲ್ಲಿ ಅಥವಾ ಸ್ವಖುಷಿ ಹೇಳಿಕೆಗಳಲ್ಲಿ ಬರೆಸಿಲ್ಲ. ಸಾಕ್ಷಿದಾರರು ಮುಂದುವರೆದು ವಾಟ್ಸಪ್ಪ ಸಂದೇಶದಲ್ಲಿ ಇಂತಿಷ್ಟು ಮೊತ್ತ ಕೊಡಬೇಕಾಗುತ್ತದೆ ಎಂದು ಅಥವಾ ಬೇಡಿಕೆ ಇಟ್ಟಿದ್ದೇನೆ ಎಂದು ಬರೆದಿದ್ದು ಇರುವುದಿಲ್ಲ ಎಂದು ಹೇಳುತ್ತಾರೆ.

ನನ್ನ ಕಾನೂನುಬದ್ದ ನೋಟೀಸಿನ 2 ನೇ ಖಂಡಿಕೆಯಲ್ಲಿ ಬರೆದುಕೊಂಡಿರುವ ಸಂಗತಿಯ ಹಾಗೇ ಆರೋಪಿತರ ವಿನಂತಿಯ ಮೇರೆಗೆ ಚೆಕ್ಕನ್ನು ನಗದೀಕರಣಕ್ಕೆ ಹಾಕಲಾಗಿದೆ ಎಂದು ಹೇಳಲಾದ ದಿನಾಂಕ, ಯಾರ ಸಮಕ್ಷಮ ಹೇಳಿದರು ಮತ್ತು ಯಾವ ಸ್ಥಳದಲ್ಲಿ ಹೇಳಿದರು ಎಂದು ನಾನು ಬರೆಸಿರುವುದಿಲ್ಲ. ಈ ವಿನಂತಿಯ ಕುರಿತು ನನ್ನ ಹತ್ತಿರ ಯಾವುದೇ ಪುರಾವೆ ಇರುವುದಿಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸುವ ಉದ್ದೇಶದಿಂದಲೇ ಅದನ್ನು ಈಡೇರಿಸುವ ಪ್ರಯತ್ನ ಮಾಡಿ ಈ ರೀತಿ ಸುಳ್ಳು ಸಂಗತಿಗಳನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ವಿಷಯ ಸಂಗತಿಗಳ ಪೂರಕ ದಾಖಲೆಗಳು ನನ್ನ ಹತ್ತಿರ ಲಭ್ಯವಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಬಿ.ಕಾಂ ಪದವಿಧರ. ನಾನು ಸಾತ್ವಿಕ ಫೈನಾನ್ಸ ಕಂಪನಿ ಬೆಂಗಳೂರು ಇದರಲ್ಲಿ ಸೇಲ್ಸ ಮ್ಯಾನೇಜರ ಎಂದು 2-3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಇದಕ್ಕಿಂತ ಮುಂಚಿತವಾಗಿ 4-5 ವರ್ಷಗಳ ಕಾಲ ಇನ್ನೊಂದು ರತನ ಇಂಡಿಯಾ ಫೈನಾನ್ಸನಲ್ಲಿ ಕ್ರೆಡಿಟ ಮ್ಯಾನೇಜರ ಎಂದು ಕೆಲಸ ಮಾಡಿರುತ್ತೇನೆ. ಇದಕ್ಕಿಂತ ಮುಂಚಿತವಾಗಿ ಒಂದುವರೆ ವರ್ಷಗಳ ಕಾಲ ಇನ್ನೊಂದು ಯುಎಇ ಎಕ್ಸಚೆಂಜ ಫೈನಾನ್ಸನಲ್ಲಿ ಕ್ರೆಡಿಟ ಮ್ಯಾನೇಜರ ಎಂದು ಕೆಲಸ ಮಾಡಿರುತ್ತೇನೆ. ಈ ರೀತಿ ಕೆಲಸ ಮಾಡಿದಕ್ಕೆ ತಿಂಗಳಿಗೆ 25 ಸಾವಿರ ರೂಪಾಯಿಗಳ ಉತ್ಪನ ನಗದು ರೂಪದಲ್ಲಿ ಬರುತ್ತಿತ್ತು. ಈ ರೀತಿ ಇರುವಾಗ ನಾನು ಇಷ್ಟು ದೊಡ್ಡ ಮೊತ್ತದ ಹಣಕಾಸಿನ ವ್ಯವಹಾರ ಮಾಡಿರುವ ಕುರಿತು ಆರ್ಥಿಕ ಸಾಮರ್ಥ್ಯವಿದೆ ಎಂದು ತೋರಿಸಲು ಪುರಾವೆ ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಸಾಲವನ್ನು ತೆಗೆದುಕೊಂಡು ಸದರಿ

ವ್ಯವಹಾರ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ಸಾಲ ಪಡೆದುಕೊಂಡು ವ್ಯವಹಾರ ಮಾಡಿರುವ ಕುರಿತು ನನ್ನ ಹತ್ತಿರ ಸಾಕ್ಷ ಪುರಾವೆಗಳು ಇರುತ್ತವೆ. ಈ ರೀತಿ ನಾನು ಸಾಲವನ್ನು ಪಡೆದುಕೊಂಡು ಹಣವನ್ನು ಹೂಡಿಕೆ ಮಾಡಿದ್ದೇನೆ ಎಂದು ನನ್ನ ಫಿರ್ಯಾದಿಯಲ್ಲಿ ಮತ್ತು ಸ್ವಖುಷಿಯಲ್ಲಿ ಬರೆಸಿಲ್ಲ. ಈ ರೀತಿ ಸಾಲ ಪಡೆದಕೊಂಡು ಹೂಡಿರುವ ಹೂಡಿಕೆಗಳ ಕುರಿತು ಇರುವ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಮುಂದೆ ಹಾಜರುಪಡಿಸುತ್ತೇನೆ. ಆದ್ದರಿಂದ ಈ ಹೇಳಿಕೆಗಳು ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

ನಿ.ಪಿ.8 ರಂತೆ ಇರುವ ನನ್ನ ಬ್ಯಾಂಕ ವಿವರಗಳ ಪಟ್ಟಿಯಲ್ಲಿ ಈ ರೀತಿ ಸಾಲವನ್ನು ಪಡೆದು ಹಣ ಹೂಡಿಕೆ ಮಾಡಿರುವ ಕುರಿತು ವ್ಯವಹಾರವಿದೇಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಾಲ ಎಂದು ಪ್ರತ್ಯೇಕವಾಗಿ ಉಲ್ಲೇಖವಿಲ್ಲ, ಆದರೆ ಅದರಲ್ಲಿ ಸಾಲ ಪಡೆದುಕೂಂಡಿರುವ ಕುರಿತು ವಿವರಣೆ ಇರುತ್ತದೆ, ಸಾಲದ ಕುರಿತು ದಾಖಲಾತಿಯನ್ನು ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

ನಾನು ಆರೋಪಿತರ ಜೊತೆಗೆ ಹಣಕಾಸಿನ ವ್ಯವಹಾರ 2011 ರಿಂದ ಮಾಡುತ್ತಿದ್ದೇನೆ ಎಂದು ಫಿರ್ಯಾದಿಯಲ್ಲಿ ಬರೆಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು 2011 ರಿಂದ ಎಂದು ಬರೆಸಿಲ್ಲ, 2015 ರಿಂದ ಹಣಕಾಸಿನ ವ್ಯವಹಾರ ಮಾಡುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಈ ರೀತಿ 2015 ರಿಂದ ಆರೋಪಿತರ ಜೊತೆಗೆ ಹಣಕಾಸಿನ ವ್ಯವಹಾರ ಮಾಡುತ್ತಿದ್ದೇನೆ ಎಂದು ಮಾಹಿತಿ ನಮ್ಮ ವಕೀಲರಿಗೆ ಕೊಟ್ಟಿದ್ದೆ. ನನ್ನ ಫಿರ್ಯಾದಿಯನ್ನು ಬರೆಯಲು ಮಾಹಿತಿ ನಾನೇ ನೀಡಿದ್ದೆ. ಅದರ ಸಂಗತಿಗಳನ್ನು ನಾನು ಓದಿ ನೋಡಿ ತಿಳಿದುಕೊಂಡಿದ್ದೇನೆ. ಸಾಕ್ಷಿದಾರರಿಗೆ ತಮ್ಮ ಫಿರ್ಯಾದಿ ತೋರಿಸಿ, ಅದರ 2 ನೇ ಖಂಡಿಕೆಯಲ್ಲಿ 2011 ರಿಂದ ಹೂಡಿಕೆ ಮಾಡಬೇಕು ಎಂದು ಹೇಳಿದ್ದು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಅದರಂತೆ ಸದರಿ ಖಂಡಿಕೆಯಲ್ಲಿ ಮುಂದುವರೆದು ಆರೋಪಿತರ ಒಪ್ಪಿಗೆ ಮೇರೆಗೆ ಡಿಮ್ಯಾಟ ಅಕೌಂಟ ತೆರೆದಿದ್ದು ಮತ್ತು ಕೆಲವು ವ್ಯವಹಾರಗಳನ್ನು ಮಾಡಿದ್ದು ಎಂದು ಬರೆದುಕೂಂಡಿರುವ ಸಂಗತಿ ನಿಜವಿರುತ್ತದೆ. ಅದೇ ಖಂಡಿಕೆಯ ಉಪಖಂಡಿಕೆಯಲ್ಲಿ 2015 ನೇ ಇಸ್ವಿಯಲ್ಲಿ ಆರೋಪಿತರು ಪುನಃ ಹೂಡಿಕೆ ಮಾಡಬೇಕು ಎಂದು ಹೇಳಿದ್ದಾರೆ ಬರೆಸಿರುವ ವಿಷಯ ಸಂಗತಿ ಸಹ ನಿಜವಿರುತ್ತದೆ.

ಈ ರೀತಿ ಫಿರ್ಯಾದಿಯಂತೆ 2011 ರಿಂದ 2019 ರವರೆಗೆ ಇರುವ ಹೂಡಿಕೆ ವ್ಯವಹಾರಗಳನ್ನು ವಿವರವಾಗಿ ಬರೆಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು 2015 ನೇ ಇಸ್ವಿಯಿಂದ ಬರೆಸಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ 2011 ರಿಂದ 2019 ರವರೆಗೆ ನಮ್ಮ ಮಧ್ಯ ಇರುವ ಹಣಕಾಸಿನ ವ್ಯವಹಾರಗಳ ವಿವರಗಳನ್ನು ಕೊಡಲು ಅಡಚಣೆವಿಲ್ಲ ಎಂದರೆ ಸಾಕ್ಷಿದಾರರು ಕೊಡುತ್ತೇನೆ ಎಂದು ಹೇಳುತ್ತಾರೆ.

ನಿ.ಪಿ.8 ರಂತೆ ಇರುವ ದಾಖಲೆ ನನ್ನ ಬ್ಯಾಂಕ ಖಾತೆಯ ವಿವರಗಳ ಪಟ್ಟಿ ಎಂದರೆ ನಿಜ. ಸದರಿ ಖಾತೆ ಜಂಟಿ ಖಾತೆ ಇರುವುದಿಲ್ಲ ನನ್ನ ವೈಯಕ್ತಿಕ ಖಾತೆ ಇರುತ್ತದೆ. ಸದರಿ ದಾಖಲೆಯಲ್ಲಿ ನನ್ನ ಹೆಸರು ಜಂಟಿ ಖಾತೆದಾರರು ಎಂದು ಬರೆದಿದ್ದು ಇರುತ್ತದ ಎಂದರೆ ನಿಜ. ಸದರಿ ಖಾತೆಯ ವಿವರಗಳ ಪಟ್ಟಿಯಲ್ಲಿ ಹೈಲೈಟರ ನಾನೇ ಬಳಸಿರುತ್ತೇನೆ. ಸದರಿ ದಾಖಲೆ ಬ್ಯಾಂಕನ ಅಧಿಕೃತ ದಾಖಲೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆನಲೈನ ಮೂಲಕ ನನ್ನ ಈ-ಮೇಲಗೆ ಡೌನಲೋಡ ಮಾಡಿದ ದಾಖಲೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲೆ ಈ ರೀತಿ ಆನಲೈನ ಮುಖಾಂತರ ಆಫೀಶಿಯಲ್ ವೆಬಸೈಟನಿಂದ ಡೌನಲೋಡ ಮಾಡಲಾಗಿದೆ ಎಂದು ನಮೂದು ಇಲ್ಲ ಎಂದರೆ ನಿಜ. ಅದರಂತೆ ಸದರಿ ಬ್ಯಾಂಕಿನ ಆನಲೈನ ಬಾರಕೋಡ ಸಹ ಇರುವುದಿಲ್ಲ ಎಂದರೆ ನಿಜ. ಸದರಿ ದಾಖಲೆ ಪ್ರಕಾರ 2011 ರಿಂದ 2019 ರವರೆಗೆ ಇರುವ ವ್ಯವಹಾರಗಳನ್ನು ತೋರಿಸುವುದಿಲ್ಲ, ದಿ:24-12-2018 ರಿಂದ 2019 ರವರೆಗೆ ಇರುವ ವ್ಯವಹಾರಗಳನ್ನು ಮಾತ್ರ ತೋರಿಸುತ್ತದೆ ಎಂದರೆ ನಿಜ. ಸದರಿ ಖಾತೆಯ ವಿವರಗಳ ಪಟ್ಟಿಯ ಜೊತೆ ನಾನು ಆನಲೈನ ಮುಖಾಂತರ ಡೌನಲೋಡ ಮಾಡಿದ್ದೇನೆ ಎಂದು ದೃಢೀಕರಿಸುವ ಪ್ರಮಾಣಪತ್ರವನ್ನು ಲಗತ್ತಿಸಿಲ್ಲ. ಆದ್ದರಿಂದ ಸದರಿ ವಿವರಗಳ ಪಟ್ಟಿ ನನ್ನ ಪ್ರಕರಣಕ್ಕೆ ಅನುಕೂಲವಾಗುವ ರೀತಿ ಸೃಷ್ಟೀಕರಣ ಮಾಡಿಕೊಂಡಿರುವ ಖೊಟ್ಟಿ ದಾಖಲಾತಿ ಎಂದರೆ ಸರಿಯಲ್ಲ. ನನಗೆ ಗಣಕಯಂತ್ರ ಬಳಸುವ ಪರಿಜ್ಞಾನವಿದೆ ಎಂದರೆ ನಿಜ.

2011 ನೇ ಇಸ್ವಿಯಿಂದ 2019 ನೇ ಇಸ್ವಿಯವರೆಗೆ ಆರೋಪಿತರು ಎಷ್ಟು ಮೊತ್ತಗಳ ವ್ಯವಹಾರ ಯಾವ ದಿನಾಂಕಗಳಂದು ಮಾಡಿದ್ದಾರೆ ಎಂದು ನನ್ನ ಫಿರ್ಯಾದಿಯಲ್ಲಿ ಬರೆದಿಲ್ಲ, ಆದರೆ 2015 ರಿಂದ 2019 ವರೆಗೆ ಈ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಮಾತ್ರ ನಾನು ವಿವರವಾಗಿ ಬರೆದಿದ್ದೇನೆ. ನನ್ನ

ಹೇಳಿಕೆ ಪ್ರಕಾರ 2015 ರಿಂದ 2019 ರವರಗೆ ಇರುವ ಹಣಕಾಸಿನ ವ್ಯವಹಾರಗಳ ಸಂಪೂರ್ಣ ಮಾಹಿತಿ ಒದಗಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಈ ಮೊದಲು ಮಾಡಿರುವ ವ್ಯವಹಾರಗಳು ಪೂರ್ಣಗೊಂಡ ಮೇಲೆ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರಗಳ ಮಾಹಿತಿ ಮಾತ್ರ ಒದಗಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಹೀಗಿರುವಾಗ ನನ್ನ ಪ್ರಕಾರ ದಿಃ24-12-2018 ರವರೆಗೆ ನನ್ನ ಮತ್ತು ಆರೋಪಿತರ ಮಧ್ಯ ಇರುವ ಎಲ್ಲ ಮುಂಚಿತ ಇರುವ ವ್ಯವಹಾರಗಳು ಮುಗಿದುಹೋಗಿರುತ್ತದೆ ಎಂದರೆ ನಿಜ. ಹೀಗಿರುವಾಗ 2011 ನೇ ಇಸ್ವಿಯಿಂದ 2019 ನೇ ಇಸ್ವಿಯವರೆಗೆ ನಿಮ್ಮ ಮತ್ತು ಆರೋಪಿತರ ನಡುವೆ ಆಗಿರುವ ಎಲ್ಲ ರೀತಿಯ ವ್ಯವಹಾರಗಳನ್ನು ತೋರಿಸುವ ಬ್ಯಾಂಕ ವಿವರಗಳ ಪಟ್ಟಿಯನ್ನು ಹಾಜರುಪಡಿಸಲು ಅಡಚಣೆವಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದಕ್ಕೆ ನೇರ ಉತ್ತರ ಕೊಡದೇ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಹಣಕಾಸಿನ ವಿನಿಯೋಗದ ವಿವರಗಳನ್ನು ನಾನು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಹೇಳಿದ ಪ್ರಕಾರ 2015 ನೇ ಇಸ್ವಿಯಿಂದ 2019 ನೇ ಇಸ್ವಿಯವರೆಗೆ ಇರುವ ಪೂರ್ಣ ಹಣಕಾಸಿನ ವಿನಿಯೋಗದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಫಿರ್ಯಾದಿಯಲ್ಲಿ ಬರೆದಿರುವ ಹಾಗೇ ಆರೋಪಿತರು IIFL ಅಧೀಕೃತ ವಿತರಕರು (franchise holder) ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಈ ರೀತಿ ಸದರಿ ಆರೋಪಿತರು ಅಧಿಕೃತ ವಿತರಕರು ಇರುವ ಕುರಿತು ದಾಖಲೆ ನೋಡಿ ಖಚಿತಪಡಿಸಿಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಕಂಪನಿಯಿಂದ ನನಗೆ ಆರೋಪಿತರಿಗೆ ಸಂಪರ್ಕಿಸಬಹುದು ಎಂದು ಮೇಲಗಳು ಬರುತ್ತವೆ, ಅದರ ಮೇಲೆ ನಾನು ಹೇಳಬಹುದು ಎಂದು ಉತ್ತರಿಸುತ್ತಾರೆ.

***ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.